# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 19, ಸಂಜಯನಗರ. ಬೆಂಗಳೂರು.**

ಸಂಖ್ಯೆ: ಸ.ಅ/ವಾ-19/ಪಿ.ಆರ್/06/2021-22 ದಿನಾಂಕ:-05-02-2022

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ: ಮುಖ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/ 2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ: 29-01-2022 ರಂದು ವಾರ್ಡ್ ನಂ:19 ಸಂಜಯನಗರ ಸೆಂಟ್ರಲ್ ಎಕ್ಸೈಜ್ ಲೇಔಟ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**::ಸಭೆಗೆ ಹಾಜರಾಗಿದ್ದವರ ವಿವರಗಳು::**

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಷರಾ |
|---|---|---|---|
| 1. | ಶ್ರೀಮತಿ ತುಳಸಿ ಮದ್ದಾನಿ (ಐ.ಎ.ಎಸ್) ವಿಶೇಷ ಆಯುಕ್ತರು ( ಹಣಕಾಸು) | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು | |
| 2. | ಶ್ರೀ.ಸಂತೋಷ್‌ಕುಮಾರ್.ಟ | ಸದಸ್ಯ ಕಾರ್ಯದರ್ಶಿ ವಾಡ್ ನಂ: 19 | |
| 3. | ಶ್ರೀ.ಗಣೇಶ್ | ಕಿರಿಯ ಆರೋಗ್ಯ ಪರಿವೀಕ್ಷಕರು | |
| 4. | ಶ್ರೀ. ಪ್ರವೀಣ್ | ಟ್ಯಾಕ್ಸ್ ಇನ್ಸ್‌ಪೆಕ್ಟರ್ | |
| 5. | ವಾಟರ್ ಇನ್ಸ್‌ಪೆಕ್ಟರ್ | ಸಹಾಯಕ ಅಭಿಯಂತರರ ಪರವಾಗಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಬೆಂಗಳೂರು | |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ ಸಂತೋಷ್‌ಕುಮಾರ್. ಟ ರವರು ಸಭೆಗೆ ಹಾಜರಾದ ಅಧ್ಯಕ್ಷರು. ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀಮತಿ ತುಳಸಿ ಮದ್ದಾನಿ ಐ.ಎ.ಎಸ್ ರವರಿಗೆ ಮತ್ತು ಸಭೆಯಲ್ಲಿ ಸೇರಿದ ಸಾರ್ವಜನಿಕರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1. ಸಂಜಯನಗರದಲ್ಲಿರುವ ಬೀದಿ ದೀಪಗಳ ದುರಸ್ಥಿಯ ಬಗ್ಗೆ ಕ್ರಮವಹಿಸಲು ನೋಡಲ್ ಅಧಿಕಾರಿಗಳು ಸೂಚಿಸಿರುತ್ತಾರೆ.
2. ವಾರ್ಡ್ ಸಮಿತಿ ಸದಸ್ಯರುಗಳು ರುದ್ರಭೂಮಿಯಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ವಾರ್ಡ್ ನೋಡಲ್ ಅಧಿಕಾರಿಗಳ ಗಮನಕ್ಕೆ ತಂದಿರುತ್ತಾರೆ. ಆಗ ವಾರ್ಡ್ ನೋಡಲ್ ಅಧಿಕಾರಿಗಳು ಸಂಜಯನಗರ ಸಬ್‌ಇನ್ಸ್‌ಪೆಕ್ಟರ್ ರವರಿಗೆ ಈ ಬಗ್ಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ.
3. ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಂದ ರಸ್ತೆ ಅಗೆತ ಮಾಡಿರುವ ರಸ್ತೆಗಳು ರೆಸ್ಟೋರೇಷನ್ ಕ್ರಮ ವಹಿಸಲು ನೋಡಲ್ ಅಧಿಕಾರಿಗಳು ಸೂಚಿಸಿರುತ್ತಾರೆ. ಹಾಗೂ ಹಳೆಯ ಒಳಚರಂಡಿ ಪೈಪ್ ಲೈನ್‌ಗಳನ್ನು ಭೂಪಸಂದ್ರ ಹಾಗೂ ವಿನಾಯಕ ಬಡಾವಣೆಯ ಮುಖ್ಯರಸ್ತೆಗಳಲ್ಲಿ ಬದಲಾಯಿಸಿಕೊಡಬೇಕಾಗಿ ಬಡಾವಣೆಯ ಸದಸ್ಯರು ವಾರ್ಡ್ ನೋಡಲ್ ಅಧಿಕಾರಿಗಳಿಗೆ ಮನವಿ ಸಲ್ಲಿಸಿರುತ್ತಾರೆ ಆಗ ನೋಡಲ್ ಅಧಿಕಾರಿಗಳು ಈ ಬಗ್ಗೆ ಕ್ರಮ ವಹಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ.
4. ಉಮಾಪತಿ ಗಾರ್ಡನ್ ಹಾಗೂ ಕೃಷ್ಣ ಭವನ್ ಬಳಿ ಪಾದಚಾರಿ ಮಾರ್ಗದಲ್ಲಿ ಹಾಗೂ ಅಡ್ಡರಸ್ತೆಗಳಲ್ಲಿ ವಾಹನಗಳನ್ನು ನಿಲುಗಡೆ ಮಾಡುವುದರಿಂದ ವಾಹನ ಸವಾರರಿಗೆ ತುಂಬಾ ಅಡಚಣೆಯಾಗುತ್ತಿದೆ ಎಂದು ಆರ್.ಎಂ.ಎಸ್ ಲೇಔಟ್‌ನ ನಿವಾಸಿಗಳು ಮನವಿ ಸಲ್ಲಿಸಿರುತ್ತಾರೆ. ಆಗ ವಾರ್ಡ್ ನೋಡಲ್ ಅಧಿಕಾರಿಗಳು ಈ ಬಗ್ಗೆ ಕ್ರಮವಹಿಸಲು ಸಂಚಾರಿ ಪೋಲೀಸ್, ಆರ್.ಟಿ.ನಗರ ರವರಿಗೆ ಸೂಚಿಸಿರುತ್ತಾರೆ.

5. GAIL ಅನಿಲ ಸಂಪರ್ಕದ ಬಗ್ಗೆ ವಾರ್ಡ್ ಸದಸ್ಯರು ವಾರ್ಡ್ ನೋಡಲ್ ಅಧಿಕಾರಿಗಳಿಗೆ ಮನೆಗಳಿಗೆ ಸಂಪರ್ಕ ನೀಡಲು ಸಂಬಂಧಪಟ್ಟವರಿಗೆ ಸೂಚಿಸಲು ಮನವಿ ಮಾಡಿರುತ್ತಾರೆ. ಆಗ ವಾರ್ಡ್ ನೋಡಲ್ ಅಧಿಕಾರಿಗಳು ಈ ಬಗ್ಗೆ ಪರಿಶೀಲಿಸಲಾಗುದು ಎಂದು ವಾರ್ಡ್ ಸದಸ್ಯರಿಗೆ ತಿಳಿಸಿರುತ್ತಾರೆ.

6. ಸಂಜಯನಗರದಲ್ಲಿರುವ ಒಟ್ಟು 16 ಉದ್ಯಾನವನಗಳ ಬಗ್ಗೆ ವಾರ್ಡ್ ಸದಸ್ಯರು ವಾರ್ಡ್ ನೋಡಲ್ ಅಧಿಕಾರಿ ರವರಿಗೆ ಉದ್ಯಾನವನಗಳ ದುರಸ್ಥಿ ಹಾಗೂ ಉದ್ಯಾನವನಗಳ ನಿರ್ವಹಣೆ ಮಾಡುತ್ತಿರುವ ಬಗ್ಗೆ ಕ್ರಮವಹಿಸಲು ನೋಡಲ್ ಅಧಿಕಾರಿಗಳಿಗೆ ಮನವಿ ಮಾಡಿರುತ್ತಾರೆ. ಆಗ ನೋಡಲ್ ಅಧಿಕಾರಿಗಳು ಈ ಬಗ್ಗೆ ಕ್ರಮ ವಹಿಸಲು ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ.

7. ಬಿ.ಡಬ್ಲ್ಯೂ.ಎಸ್.ಎಸ್.ಬಿ ವಾಟರ್ ಇನ್ಸ್‌ಪೆಕ್ಟರ್‌ರವರಿಗೆ ನೀರಿನ ಬಿಲ್ ಬಗ್ಗೆ ಅನಧಿಕೃತವಾಗಿ ಮೀಟರ್‌ಗಳನ್ನು ಅಳವಡಿಸಿ ನೀರನ್ನು ಪಡೆಯುತ್ತಿರುತ್ತಾರೆ ಎಂಬ ಬಗ್ಗೆ ವಾರ್ಡ್ ಸದಸ್ಯರು ವಾರ್ಡ್ ನೋಡಲ್ ಅಧಿಕಾರಿಗಳ ಗಮನಕ್ಕೆ ತಂದಿರುತ್ತಾರೆ. ಆಗ ಈ ಬಗ್ಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಯವರಿಗೆ ಈ ಬಗ್ಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ.

ವಾರ್ಡ್‌ನ ಅಧ್ಯಕ್ಷರು ಮಾತನಾಡುತ್ತಾ ಈ ಮೇಲಿನ ಎಲ್ಲಾ ಅಂಶಗಳನ್ನು ಕೂಡಲೇ ಬಗೆಹರಿಸುವಂತೆ ವಾರ್ಡ್ ಕಾರ್ಯದರ್ಶಿಗಳಿಗೆ ತಿಳಿಸುತ್ತಾ ಮತ್ತು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸಾರ್ವಜನಿಕರಿಗೆ ವಂದನೆಗಳನ್ನು ತಿಳಿಸುತ್ತಾ ಈ ಸಭೆಯನ್ನು ಮುಕ್ತಾಯಗೊಳಿಸಿದರು.

T. Santhosh

ವಾರ್ಡ್ ಸದಸ್ಯ ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ. 19, ಸಂಜಯನಗರ

9/2/22
ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ.19, ಸಂಜಯನಗರ

ಪ್ರತಿಯನ್ನು:-

1. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.